ವಾರದ ಮುಂಗಾರು

ಭಾನುವಾರ 29-1-1989

ಹಿಂದೂ ಧರ್ಮ ಸನಾತನ ಧರ್ಮವೇ?

ಸ್ವಾಮಿ ವಿವೇಕಾನಂದರ 125ನೇ ಜನ್ಮಶತಾಬ್ದವನ್ನು ದೇಶದಾದ್ಯಂತ ಆಚರಿಸಲಾಯಿತು. ಆದರೆ ಈ ಆಚರಣೆಯ ವೈಭವದಲ್ಲಿ ವಿವೇಕಾನಂದರ ವಿವೇಚನಾಶೀಲ ವಿಚಾರಗಳಿಗೆ ಗೋರಿಕಟ್ಟಲಾಗಿದೆ. ಸನಾತನ ಧರ್ಮದ ಹೆಸರಲ್ಲಿ ವಿವೇಕಾನಂದರನ್ನು ಪುರೋಹಿತಶಾಹಿ ಕೋಳಬೆಗಳಲ್ಲಿ ಬಂಧಿಸಿಡಲಾಗುತ್ತಿದೆ. ಧರ್ಮ ಹೀಗೆ ಅಪಮೌಲ್ಯಗೊಳ್ಳುತ್ತಿರುವ ದುರಂತವನ್ನು ವಿವೇಕಾನಂದರು ಸ್ಪಷ್ಟವಾಗಿ ಗುರುತಿಸಿದ್ದರು. ಒಂದು ವಿಶ್ಲೇಷಣೆ ಇಲ್ಲಿದೆ.

ವಡ್ಡರ್ಸೆ ರಘುರಾಮ ಶೆಟ್ಟಿ

ಈ ಶತಮಾನದ ಆದಿಯಲ್ಲಿ ತೀರಾ ಶಿಥಿಲವಾಗತೊಡಗಿದ್ದ ಭಾರತದ ಹಿಂದೂ ಧಾರ್ಮಿಕ ವ್ಯವಸ್ಥೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಸಂಘಟಿತವೂ-ಆಕ್ರಮಣಶೀಲವೂ ಆಗುತ್ತಿದೆ. ವ್ಯಾಖ್ಯಾನಕಾರರು ಇದನ್ನು ಹಿಂದೂ ಪುನರುತ್ಥಾನವೆಂದು ವರ್ಣಿಸುತ್ತಿದ್ದಾರೆ.

ಒಂದು ಜನಾಂಗದ ಉನ್ನತಿ ಅಥವಾ ಅವನತಿಗೆ ಪರೋಕ್ಷ ಪ್ರೇರಣೆಯಾಗಿ ಉಳಿದುಕೊಂಡು ಬಂದಿರುವ ಧರ್ಮ ಕಾಲಚಕ್ರದ ಉರುಳಾವಿಕೆಯಲ್ಲಿ ಏಳು-ಬೀಳುಗಳನ್ನು ಅನುಭವಿಸುತ್ತದೆ. ಇಂತಹ ಇತಿಹಾಸದ ತಿರುವಿನಲ್ಲಿ ಸಹಸ್ರಾರು ವರ್ಷಗಳ ಕಾಲ ಅವನತಿಯ ಹಾದಿ ಹಿಡಿದು ಮೂಢನಂಬಿಕೆಗಳು ಮತ್ತು ಕಂದಾಚಾರಗಳ ಕೊಳಕು ಮೂಟೆಯಾದ ಹಿಂದೂ ಧರ್ಮದ ಪುನರುತ್ಥಾನ ಈಗ ಆರಂಭವಾಗಿರುವುದು ಸ್ವಾರಸ್ಯದ ಸಂಗತಿ. ಈ ಹಿಂದೂ ಪುನರುತ್ಥಾನವಾದಿಗಳು ಸನಾತನ ಹಿಂದೂ ಧರ್ಮದ ವೇದಾಂತಗಳ ಸಾರವನ್ನು ಜಗತ್ತಿಗೆ ಸಾರಿದ ಸ್ವಾಮಿ ವಿವೇಕಾನಂದರ ಹೆಸರನ್ನು ಬಳಸುತ್ತಿರುವುದು ಇನ್ನಷ್ಟು ಸ್ವಾರಸ್ಯದ ಸಂಗತಿ.

ಮಾನವ ಸಮೂಹದಲ್ಲಿ ಅಸಮತೆಯನ್ನು ನಿರ್ಮಿಸಿ, ಅವರ ಮುನ್ನಡೆಯ ದಾರಿಗೆಲ್ಲಾ ಕಂದಾಚಾರಗಳ ಬೇಲಿ ಹಾಕಿ, ಅವರ ಬುದ್ಧಿಗೆ ಮೂಢನಂಬಿಕೆಗಳ ಮಂಕು ತೊಡಿಸಿ, ಪರಸ್ಪರ ಪ್ರೀತಿಗೆ ಜಾತೀಯ ಲೋಪ ಹಾಕಿ ಹಿಂದೂ ಸಮಾಜವನ್ನು ದುರ್ಬಲ ಜನರ ಗೂಡಾಗಿ ಮಾಡಿರುವ ಅದೇ ಪುರೋಹಿತ ಪರಂಪರೆ ಈ ಆಧುನಿಕ ಯುಗದಲ್ಲೂ ಹಿಂದೂ ವ್ಯವಸ್ಥೆಯನ್ನು ವೈಭವೀಕರಿಸುತ್ತಿರುವುದು ಅಚ್ಚರಿಯನ್ನುಂಟು ಮಾಡುತ್ತದೆ. ಅದರಲ್ಲಿಯೂ ಈ ಪುನರುತ್ಥಾನವಾದಿಗಳು ಸ್ವಾಮಿ ವಿವೇಕಾನಂದರ ಹೆಸರನ್ನು ಧಾರಾಳವಾಗಿ ಬಳಸುತ್ತಿರುವುದು ತೀರಾ ವಿಷಾದನೀಯ.

ಈ ಪುನರುತ್ಥಾನವಾದಿಗಳಿಗೆ ವಿವೇಕಾನಂದರ ಹೆಸರು ಬಳಸಲು ಕಾರಣವಾದುದು 1893 ಸೆಪ್ಟೆಂಬರ್ 11ರಂದು ಅವರು ಚಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಸನಾತನ ಸನ್ಯಾಸಿ ಪಂಥ ಭಾರತದಲ್ಲಿ ಪ್ರಚಾರ ಪಡಿಸಿದ ವೇದಾಂತದ ಸಾರವನ್ನು ಎತ್ತಿ ಹಿಡಿದುದೇ ಆಗಿದೆ.

ವಿವೇಕಾನಂದರು ವೇದಾಂತದ ಹಿರಿಮೆಯನ್ನು ಎತ್ತಿ ಹಿಡಿದಿರಬಹುದು. ಉಪನಿಷತ್ತುಗಳ ತತ್ತ್ವ ವಿಚಾರಗಳನ್ನು ಮೆಚ್ಚಿರಬಹುದು. ಆದರೆ ಅವರೆಂದೂ ನಮ್ಮಲ್ಲಿ ಆಚರಣೆಗೆ ಬಂದಿರುವ ವೈದಿಕ ಹಿಂದೂ ಧರ್ಮವನ್ನು ಒಪ್ಪಿರಲಿಲ್ಲ. ಈ ವೈದಿಕ ಧರ್ಮದ ಸೂತ್ರವಾಗಿರುವ ವರ್ಣಾಶ್ರಮವನ್ನು ಸಹಿಸಿರಲಿಲ್ಲ.

ಧರ್ಮವು ಎಲ್ಲ ಕಾಲದಲ್ಲೂ ಮಾನವ ಸಮಾಜದ ಮೇಲೆ ತನ್ನ ಪ್ರಭಾವ ಮುದ್ರೆಯನ್ನೊತ್ತಿದೆಯೆಂಬುದನ್ನು ಯಾರಾದರೂ ಒಪ್ಪಿಕೊಳ್ಳಬೇಕಾಗುತ್ತದೆ. ಮಾನವಕುಲದ ಕೊನೆ ಇಲ್ಲದ ಪಯಣದಲ್ಲಿ ಧರ್ಮ ಮಾನವನ ಉತ್ಕರ್ಷಕ್ಕೆ ದಾರಿ ತೋರಿಸಿದ್ದೂ ಇದೆ. ಅವನ ವಿನಾಶ ಹೋರಾಟಕ್ಕೆ ಕಾರಣವಾದುದೂ ಇದೆ. ಇಷ್ಟೆಲ್ಲ ಆದರೂ ಮಾನವ ಸಮಾಜ ಧರ್ಮಕ್ಕೆ ಅಂಟಿಕೊಂಡೇ ಉಳಿದಿದೆ.

ಆದರೆ ಭಾರತೀಯ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಇಂದು ಪುನರುತ್ಥಾನಕ್ಕೆ ಯತ್ನಿಸುತ್ತಿರುವ ವೈದಿಕ ಹಿಂದೂ ಧರ್ಮ ಯಾವುದು ? ಮತ್ತು ಸ್ವಾಮಿ ವಿವೇಕಾನಂದರು ಯಾವ ಧರ್ಮ ತತ್ವಗಳನ್ನು ಎತ್ತಿ ಹಿಡಿದ ಸನಾತನ ಧರ್ಮ ಯಾವುದು ? ಎಂಬುದನ್ನು ಈ ಲೇಖನದಲ್ಲಿ ಚರ್ಚಿಸ ಬಯಸುತ್ತೇನೆ.

ಜಗನ್ಮಾನ್ಯ ವೇದಾಂತಿಯಾಗಿ ವಿಶ್ವಮಾನವ ಧರ್ಮದ ಸಂದೇಶ ಸಾರಿದ ಸ್ವಾಮಿ ವಿವೇಕಾನಂದರು ಭರತ ಖಂಡದಲ್ಲಿ ಹುಟ್ಟಿ ಇಂದಿಗೆ ಒಂದೂಕಾಲು (125 ವರ್ಷ) ಶತಮಾನ ಸಂದಿದೆ. ಬದುಕಿದ ಕೇವಲ ಮೂವತ್ತೊಂಭತ್ತು ವರ್ಷಗಳ ಅವಧಿಯಲ್ಲಿ ವಿಶ್ವದ ಪ್ರಜ್ಞಾವಂತ ಜನಸಮೂಹದ ಮೇಲೆ ಅಗಾಧ ಪ್ರಭಾವ ಬೀರಿದ ಈ ಮಹಾ ವ್ಯಕ್ತಿ ಹಿಂದೂ ಧರ್ಮಾಚರಣೆಯಲ್ಲಿ ಸಂಚಯವಾಗಿರುವ ಹೊಲಸನ್ನೆಲ್ಲ ಎತ್ತಿ-ಎತ್ತಿ ಎಸೆದಿದ್ದರು.

“ಭಾರತೀಯರನ್ನು ದೈಹಿಕವಾಗಿ ಕೃಶರೂ-ವೈಚಾರಿಕವಾಗಿ ದುರ್ಬಲರೂ ಆಗಿ ಮಾಡಿರುವ ಹಿಂದೂ ವೈದಿಕ ಧರ್ಮದ ಪರಿಷ್ಕಾರ ಆಗಬೇಕು”, ಎಂದು ಬಯಸಿದ್ದರು.

ಚಿಕಾಗೋ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಸ್ವದೇಶಕ್ಕೆ ಮರಳುವ ದಾರಿಯಲ್ಲಿದ್ದ ಸ್ವಾಮಿ ವಿವೇಕಾನಂದರು ಲಂಡನ್ನಿನಲ್ಲಿ ತಮ್ಮ ಅಭಿಮಾನಿಗಳ ಸಣ್ಣ ಸಭೆಯೊಂದರಲ್ಲಿ ಮಾತನಾಡುತ್ತಾ, “ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಮೂಲಭೂತ ಪರಿವರ್ತನೆಯಾಗಬೇಕೆಂದು ಬಯಸುವ ಅಗ್ರಗಾಮಿ ನಾನಾಗಿದ್ದೇನೆ. ಮುನ್ನಡೆಯ ತೀವ್ರ ಆಸೆಯೂ ಇಲ್ಲದೆ ಪೂರ್ವಾಚಾರ ಪರಾಯಣರಾಗಿ ಜೀವಚ್ಛವ ರಾಶಿಯಾದ ಭಾರತಕ್ಕೆ, ಈಗ

"ಹೋಗುತ್ತಿದ್ದೇನೆ" ಎನ್ನುವ ನೋವನ್ನು ತೋಡಿಕೊಂಡಿದ್ದರು.

ವಿವೇಕಾನಂದರು 1894 ರಲ್ಲಿ ಲಂಡನ್‌ನಲ್ಲಿ ಪ್ರಸ್ತಾಪಿಸಿದ್ದ ಪೂರ್ವಾಚಾರಗಳು ಮತ್ತು ಧೀಮಣಿಗಾರಿಕೆಯ ಚಿತ್ರಗಳನ್ನು ಭಾರತಕ್ಕೆ ಮರಳಿದ ನಂತರ ಬಿಡಿಸುತ್ತಾರೆ.

ಚಿಕಾಗೋದಿಂದ ಸ್ವದೇಶಕ್ಕೆ ಮರಳಿದ ವಿವೇಕಾನಂದರು ಮದ್ರಾಸಿನಲ್ಲಿ ತಮಗೆ ನೀಡಿದ ಸನ್ಮಾನ ಸಮಾರಂಭವೊಂದರಲ್ಲಿ ಹಿಂದೂ ಧರ್ಮದ ವಿಕೃತಿಯ ಬಗ್ಗೆ ತೀರಾ ನಿಷ್ಠುರವಾದ ಕೆಲವು ಮಾತುಗಳನ್ನಾಡುತ್ತಾರೆ.

"...ನೀಚರೂ ಕುತಂತ್ರಿಗಳೂ ಆದ ಪುರೋಹಿತರು ಎಲ್ಲಾ ತರದ ಮೂಢನಂಬಿಕೆಗಳನ್ನು ವೇದ ಮತ್ತು ಹಿಂದೂಧರ್ಮದ ಸಾರವೆಂದು ಬೋಧಿಸುತ್ತಾರೆ. ಈ ತರ್ಕ ಪುರೋಹಿತರಾಗಲೀ ಅವರ ತಾತ-ಮುತ್ತಾತಂದಿರಾಗಲೀ ನೂರಾರು ತಲೆಮಾರುಗಳಿಂದ ವೇದದ ಒಂದು ಭಾಗವನ್ನೂ ನೋಡಿಲ್ಲ. ಕಂದಾಚಾರಗಳನ್ನು ಅನುಸರಿಸಿ ಹೀನಸ್ಥಿತಿಗೆ ಬರುತ್ತಾರೆ......ಭರತ ಖಂಡದಲ್ಲಿ ಧರ್ಮವೇನಾದರೂ ಉಳಿದುಕೊಂಡಿರುವುದೇನು ? ಜ್ಞಾನ, ಭಕ್ತಿ ಯೋಗಗಳ ಮಾರ್ಗವೆಲ್ಲ ಹೋಯಿತು. ಈಗ ಉಳಿದಿರುವುದು ಒಂದೇ ಧರ್ಮ ಅದೇ—"ನೀ ನನ್ನ ಮುಟ್ಟಬೇಡ..."



ಧರ್ಮವು ಎಲ್ಲ ಕಾಲದಲ್ಲೂ ಮಾನವಸಮಾಜದ ಮೇಲೆ ತನ್ನ ಪ್ರಭಾವ ಮುದ್ರೆಯನ್ನೊತ್ತಿದೆಯೆಂಬುದನ್ನು ಯಾರಾದರೂ ಒಪ್ಪಿಕೊಳ್ಳಬೇಕಾಗುತ್ತದೆ. ಮನುಕುಲದ ಕೊನೆಯಿಲ್ಲದ ಪಯಣದಲ್ಲಿ ಧರ್ಮ ಮಾನವನ ಉತ್ಕರ್ಷಕ್ಕೆದಾರಿತೋರಿಸಿದ್ದೂ ಇದೆ; ಅವರ ಮಾರಣ ಹೋಮಕ್ಕೆ ಕಾರಣವಾದದ್ದೂ ಇದೆ.

ಸನಾತನ ಧರ್ಮ ಹಿಡಿದಿರುವ ಅವನತಿಯ ಹಾದಿ ಹಾಗೂ ಅದಕ್ಕೆ ಕಾರಣರಾದ ಪುರೋಹಿತರ ಬಗ್ಗೆ ಮೇಲಿನ ತೀಕ್ಷ್ಣ ಮಾತುಗಳನ್ನಾಡಿದ ವಿವೇಕಾನಂದರು ತನ್ನ ದೇಶಬಾಂಧವರಿಗೆ ಧರ್ಮವು ಒದಗಿಸಿದ ದುರ್ಗತಿಯ ಬಗ್ಗೆ "ನನ್ನಪ್ಪ ಮರುಗುತ್ತಾರೆ" ಆಧುನಿಕ ಭರತ ಖಂಡದಲ್ಲಿ ಧಾರ್ಮಿಕ ಭಾವನೆ ಮಾಯವಾಗಿದೆ. ಬಾಹ್ಯ ಆಚಾರ ಮಾತ್ರ ಉಳಿದಿದೆ. ಜನರು ಹಿಂದೂಗಳೂ ಅಲ್ಲ. ವೇದಾಂತಿಗಳೂ ಅಲ್ಲ. ಅವರು ಕೇವಲ ಅಸ್ಪೃಶ್ಯಗಳು. ನಿಮಗೆ ಏನಾದರೂ ಒಳ್ಳೆಯದಾಗಬೇಕೆಂಬ ಆಸೆ ಇದ್ದರೆ ನಿಮ್ಮ ಬಾಹ್ಯಾಚಾರಗಳನ್ನೆಲ್ಲಾ ಆಚೆಗೆ ಎಸೆಯಿರಿ. ಬದುಕಿರುವ ಮಾನವ ದೇವನನ್ನು ಆರಾಧಿಸಿ" ಎಂದಿದ್ದರು ವಿವೇಕಾನಂದರು.

ಹಿಂದೂ ಸಮಾಜವನ್ನು ತೀರಾ ಅಂಧಗೊಳಿಸುವ ಜಾತಿ ಪದ್ಧತಿ, ಅಸ್ಪೃಶ್ಯತೆ ಹಾಗೂ ಕಂದಾಚಾರಗಳ ಬಗ್ಗೆ ವಿವೇಕಾನಂದರು ಆಡಿರುವ ಈ ಕ್ರಾಂತಿಕಾರಿ ವಿಚಾರಗಳಿಗೆ ಹಿಂದೂ ಪುನರುತ್ಥಾನವಾದಿಗಳು ಯಾವ ಸ್ಥಾನ ಕೊಟ್ಟಿರುವರೆಂದು ಕೇಳಬೇಕಾಗುತ್ತದೆ.

ಹಿಂದೂ ಧರ್ಮವನ್ನು ತೀರಾ ಅಧೋಗತಿಗೆ ಇಳಿಸಿದ ಜಾತಿ ಪದ್ಧತಿಯ ಅಮಾನುಷ ಆವಿಷ್ಕಾರಗಳ ಬಗ್ಗೆ ವಿವೇಕಾನಂದರು ಸಾರಿ ಹೇಳಿದ್ದರು. ಈ ಜಾಪದ ನಿವಾರಣೆಯಾಗದ ಹೊರತು ಭಾರತಕ್ಕೆ ಮುಕ್ತಿಇಲ್ಲವೆಂದಿದ್ದರು. ಒಂದು ಧರ್ಮದ ಅನುಯಾಯಿಗಳನ್ನು ಹುಟ್ಟಿನಿಂದಲೇ ಮೇಲು ಕೀಳೆಂದು ವರ್ಗೀಕರಿಸುವ ಜಾತಿಪದ್ಧತಿಯನ್ನು ಕಿತ್ತೊಗೆದು ಹಾಕಲು ಕರೆ ನೀಡಿದ್ದರು.

ಆದರೆ ಇಂದು ವಿವೇಕಾನಂದರಹೆಸರು ಬಳಸಿಕೊಂಡು ಹಿಂದೂ ಧರ್ಮದ ಪುನರುತ್ಥಾನಕ್ಕೆ ಯುಕ್ತಿ ಕುತ್ರಿರುವವರು ಮಾಡುತ್ತಿರುವುದಾದರೂ ಏನು ? ಮಾನವಜಾತಿ ಪದ್ಧತಿಯನ್ನು ಪಾತಕವೆಂದು ಅವರು ವರ್ಣಿಸಿದ್ದರೋ ಅದೇ ಪದ್ಧತಿಯನ್ನು ಅಬಾಧಿತವಾಗಿ ಉಳಿಸಿಕೊಂಡಿಲ್ಲವೇ ? ಮನುಷ್ಯನ ಮುನ್ನಡೆಗೆ ಎಲ್ಲ ವಿಧದ ಕ್ಲೇಶ ಬಂಧನಕಾರಿಯಾಗಿರುವ ಜಾತಿ ಪದ್ಧತಿಯನ್ನು ಉಳಿಸಿಕೊಂಡು ಮಾಡುವ ಧರ್ಮಕಾರ್ಯವಾದರೂ ಏನು ?.

ಹಿಂದು-ಮುಂದಿನ ಯೋಚನೆಯಿಲ್ಲದೆ ಹಿಂದೂ ಸಮಾಜದ ಕೇರು ಹತ್ತಿ ಉತ್ಸವ ನಡೆಸುವವರು ಹಿಂದೂ ಮೂಲಭೂತವಾದದ ಪುನರುತ್ಥಾನಕ್ಕೆ ಗಾಳಿ ಬೀಸುವವರು ಯೋಚಿಸಬೇಕಾದ ಹಲವಾರು ಅಮೂಲ್ಯ ವಿಚಾರಗಳನ್ನು ಅವರು ನಮ್ಮ ಮುಂದೆ ಇಟ್ಟಿದ್ದಾರೆ.

ಸ್ವಾಮಿ ವಿವೇಕಾನಂದರು ಜಾತಿ ಪದ್ಧತಿಯಿಂದ ಹುಟ್ಟಿಕೊಂಡ ದ್ಯಾರಿದ್ರ್ಯ, ಅಜ್ಞಾನ ಮತ್ತು ಅಂಧಕಾರವು ಅಂತಿಮವಾಗಿ ದೇಶದ ಗುಲಾಮಗಿರಿಗೆ ಹೇಗೆದಾರಿ ಮಾಡಿಕೊಂಡಿತೆಂಬುದನ್ನು ಒಮ್ಮೆ ಹೀಗೆ ವರ್ಣಿಸಿದ್ದರು.- "ಭರತಖಂಡದಲ್ಲಿ ಯಾರಾದರೂ ಕೀಳು ಜಾತಿಯಲ್ಲಿ ಹುಟ್ಟಿದರೆ ಅವರಿಗೆ ಉಳಿಗಾಲವಿಲ್ಲ. ಅವರಿಗೆ ಉತ್ತಮ ಬದುಕಿನ ಭರವಸೆ ಇಲ್ಲ. ಮುನ್ನಡೆಯಲು ದಾರಿಯೇ ಇಲ್ಲ. ಇರುವ ಕಷ್ಟದಿಂದ ತಪ್ಪಿಸಿಕೊಳ್ಳುವ ಅವಕಾಶವೂ ಇಲ್ಲ. ಎಷ್ಟು ಶ್ರಮಪಟ್ಟರೂ ಅವರು ಮೇಲೇರರು. ಕ್ರೂರ ಸಮಾಜದಿಂದ ಬೀಳುವ ಪೆಟ್ಟನ್ನು ಅವರು ಅನುಭವಿಸುತ್ತಿರುವರು. ತಾವು ಮಾನವ ವರ್ಗಕ್ಕೆ ಸೇರಿದವರೆಂಬುದನ್ನೂ ಅವರು ಮರೆತಿರುವರು. ಇವೆಲ್ಲದರ ಪರಿಣಾಮವೇ ದೇಶದ ಗುಲಾಮಗಿರಿ"

1896ರಲ್ಲಿ ವಿವೇಕಾನಂದರು ಒಮ್ಮೆ ತಮ್ಮ ಕೆಲವರು ಬ್ರಾಹ್ಮಣ ಶಿಷ್ಯರೊಂದಿಗೆ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಶಿಷ್ಯರು ಹಲವಾರು ಪ್ರಶ್ನೆಗಳನ್ನು ಕೇಳುತ್ತಾರೆ. ಜಗತ್ತಿನ ಇತರ ಜನಾಂಗಗಳಿಗೆ ಹೋಲಿಸಿದರೆ ಭಾರತ ಇಷ್ಟೊಂದು ಅಧೋಗತಿಗಿಳಿಯಲು ಕಾರಣವೇನೆಂದು ತಿಳಿಯಬಯಸುತ್ತಾರೆ.

ಗುರು-ಶಿಷ್ಯರ ನಡುವಿನ ಈ ಸಂವಾದದಲ್ಲೂ ವಿವೇಕಾನಂದರು ಪುರೋಹಿತಶಾಹಿಯು ಸನಾತನ ಧರ್ಮವನ್ನು ತಿರುಚಿ ವರ್ಣಾಶ್ರಮವನ್ನು ಸೃಷ್ಟಿಸಿ ಅದರ ಸುತ್ತ ಮುತ್ತ ಪುರಾಣಗಳನ್ನು ಹೆಣೆದುದೇ ಧರ್ಮದ ಅವನತಿ ಮತ್ತು ಅದರ ಅವಲಂಬಿಗಳ ಅಧೋಗತಿಗೆ ಕಾರಣವಾಯಿತೆನ್ನುತ್ತಾರೆ.

"ಆಧುನಿಕ ಭರತ ಖಂಡದಲ್ಲಿ ಬಾಹ್ಯ ಆಚರಣೆ ಮಾತ್ರ ಉಳಿದುಕೊಂಡಿದೆ. ಧಾರ್ಮಿಕ ಭಾವನೆಮಾಯವಾಗಿದೆ. ಜನರು ಹಿಂದೂಗಳೂ ಅಲ್ಲ. ವೇದಾಂತಿಗಳೂ ಅಲ್ಲ. ಅವರು ಕೇವಲ ಅಸ್ಪೃಶ್ಯಗಳು".

ಸನಾತನ ಧರ್ಮ ಪುರೋಹಿತಶಾಹಿಯ ವರ್ಗದರ್ಶನದಲ್ಲಿ ಹಿಡಿದಿರುವ ಅಡ್ಡದಾರಿಯನ್ನು ತಿದ್ದಲು ಹೊರಟ ಗೌತಮ ಬುದ್ಧನ ಕಥೆಯನ್ನು ವಿವೇಕಾನಂದರು ತಮ್ಮ ಶಿಷ್ಯರಿಗೆ ಹೇಳುತ್ತಾರೆ. "ಗೌತಮ ಬುದ್ಧ ಒಂದು ದರಿದ್ರರಿಗೆ, ದೀನರಿಗೆ, ದುಃಖಿಗಳಿಗೆ ಹೇಗೆ ಮನಕರಗಬೇಕೆಂಬುದನ್ನು ತೋರಿಸಿದ. ಆದರೆ ಅದನ್ನು ಪುರೋಹಿತರು ಲಕ್ಷಿಸಲಿಲ್ಲ. ರಾಕ್ಷಸರನ್ನು ತಮ್ಮ ಮಾರ್ಗಕ್ಕೆಳೆಯಬೇಕೆಂದು ದೇವರೇ ರೂಪ ತಾಳಿ ಬಂದನೆಂಬ ಕಥೆಗಳನ್ನು ಪುರೋಹಿತರು ಹೆಣೆದರು".

"ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯವಾಣಿಯಲ್ಲಿ ಮನುಷ್ಯತ್ವದ ಘನತೆಯನ್ನು ಬೋಧಿಸುವುದಿಲ್ಲ. ಪ್ರಪಂಚದ ಯಾವ ಧರ್ಮವೂ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ಹಿಸುಕಿಲ್ಲ......ಈ ತಪ್ಪು ಹಿಂದೂ ಧರ್ಮದ್ದಲ್ಲ. ಆಷ್ಟರ ಸಂಪ್ರದಾಯ ಶರಣರದು. ಪುರೋಹಿತರದು. ಪಾರಮಾರ್ಥಿಕ ಮತ್ತು ವ್ಯಾವಹಾರಿಕವೆಂದು ನಾನಾ ಬಗೆಯ ಕ್ರೂರ ಸಾಧನಗಳನ್ನು ಸೃಷ್ಟಿಸಿದ ರಕ್ಕಸರು".

ಧರ್ಮ ಮತ್ತು ವೇದಾಂತದ ಬಗ್ಗೆ ಅಗಾಧವಾದ ಜ್ಞಾನ ಗಳಿಸಿದವರು ವಿವೇಕಾನಂದರೆಂಬುದನ್ನು ಹಿಂದೂ ಪುನರುತ್ಥಾನವಾದಿಗಳು ನಿರಾಕರಿಸಲಾರರು.



"ಪ್ರಪಂಚದ ಯಾವ ಧರ್ಮವೂ ಹಿಂದೂ ಧರ್ಮದಷ್ಟು ಭವ್ಯ ವಾಣಿಯಲ್ಲಿ ಮನುಷ್ಯತ್ವದ ಘನತೆಯನ್ನು ಬೋಧಿಸುವುದಿಲ್ಲ. ಪ್ರಪಂಚದ ಯಾವ ಧರ್ಮವೂ ದಲಿತರ ಕುತ್ತಿಗೆಯನ್ನು ಹಿಂದೂ ಧರ್ಮದಷ್ಟು ಕ್ರೂರವಾಗಿ ಹಿಸುಕಿಲ್ಲ".

ಹಾಗಿದ್ದರೆ ಅವರು ವಿವೇಕಾನಂದರ ಹೆಸರನ್ನು ಬಳಸುತ್ತಿರಲಿಲ್ಲ. ಹಿಂದೂ ಧರ್ಮದಲ್ಲಿ ಮನೆ ಮಾಡಿರುವ ಹೊಲಸು ಸಂಪ್ರದಾಯಗಳ ಪ್ರಜ್ಞೆಯೂ ಈ ಪುನರುತ್ಥಾನವಾದಿಗಳಿಗಿರಲೇಬೇಕು. ಇವರು ನಿಜಕ್ಕೂ ಧರ್ಮಧೀರರುಗಳಾದರೆ ಹಿಂದೂ ಧರ್ಮದ ಹೊಲಸುಗಳನ್ನು ತೊಡೆದುಹಾಕಲು ಇವರೇನು ಮಾಡುತ್ತಿರುವರೆಂಬುದನ್ನು ತಿಳಿಸಬೇಕು. ಅದೇ ಹೊಲಸು ತುಂಬಿದ ಧರ್ಮಕುಂಭವನ್ನು ಮುಗ್ಧ ಜನರ ತಲೆಗೆ ಏರಿಸಿ ಮೆರವಣಿಗೆ ಮಾಡಿ ಊರನ್ನೆಲ್ಲಾ ಧರ್ಮಾಂಧತೆಯ ಹೊಲಗೇರಿಯಾಗಿ ಮಾಡಬಾರದು.

ಧರ್ಮ ಒಂದು ಸಾಂಘಿಕ ಸ್ವರೂಪ ಕೊಟ್ಟು ಅದರ ವೈಭವದ ಮೆರವಣಿಗೆ ನಡೆಸುವುದುಸರಿಯಲ್ಲವೆಂದು ವಿವೇಕಾನಂದರು ಹೇಳಿದ್ದರು, ಪ್ರಪಂಚದ ಜನರನ್ನೆಲ್ಲಾ ಒಂದೇ ಧರ್ಮದ ಸೂತ್ರಕ್ಕೆ ತರುವುದೂ ಅಪಾಯಕಾರಿಯೆಂದು ಅವರು ಎಚ್ಚರಿಕೆನೀಡಿದ್ದರು. ಈ ವಿಚಾರಧಾರೆಗೆ ಸಂಬಂಧಿಸಿದಂತೆ ಒಮ್ಮೆ ಅವರು ಧರ್ಮದ ಒಂದು ವಿಶ್ಲೇಷಣೆ ಮಾಡುತ್ತಾರೆ. ಧರ್ಮ ಬಾಯಿ ಮಾತಲ್ಲ, ನಂಬಿಕೆಯಲ್ಲ. ಸಿದ್ಧಾಂತವೂ ಅಲ್ಲ. ಅಥವಾ ಅದೊಂದು ಕೋಮುವಾರುಭಾವನೆಯೂ ಅಲ್ಲ. ಧರ್ಮ ಕೋಮುಗಳಲ್ಲೂ ಸಂಘಗಳಲ್ಲೂ ಜೀವಿಸಲಾರದು. ಆತ್ಮನಿಗೂ ದೇವನಿಗೂ ಇರುವ ಸಂಬಂಧವಿದು. ಇದನ್ನು ಒಂದು ಸಂಘವಾಗಿ ಹೇಗೆ ಮಾಡುವುದು? ಹಾಗೇನಾದರೂ ಮಾಡಿದರೆ ಧರ್ಮವೆಂಬುದು ವ್ಯಾಪಾರವಾಗುವುದು. ವ್ಯಾಪಾರಿ ಗಣನೆಗೆ ಸೇರಿದ ಧರ್ಮದಲ್ಲಿ ಆಧ್ಯಾತ್ಮಿಕತೆ ಸಾಯುವುದು. ಧರ್ಮ ದೇವಸ್ಥಾನ ಕಟ್ಟುವುದರಲ್ಲಿಲ್ಲ. ಅಥವಾ ಸಾರ್ವಜನಿಕ ಪೂಜೆಗೆ ಹೋಗುವುದರಲ್ಲಿಯೂ ಇಲ್ಲ. ಅದು ಗ್ರಂಥದಲ್ಲಿಲ್ಲ. ಮಾತಿನಲ್ಲಿಯೂ ಇಲ್ಲ. ಧರ್ಮವೆಂದರೆ ಆತ್ಮ ಸಾಕ್ಷಾತ್ಕಾರ. ಪ್ರತಿಯೊಂದು ಧರ್ಮದಲ್ಲಿಯೂ ಒಂದು ವಿಶೇಷದ ಭಾವನೆ ಇದೆ. ಪ್ರತಿಯೊಂದು ಧರ್ಮವೂ ಮಾನವನಲ್ಲಿರುವಯಾವುದೋ ಒಂದು ಸ್ವಭಾವದ ಶೋಭೆಗೆ ಸಹಕಾರಿಯಾಗುವುದು. ಮತ್ತು ಆ ಜನಾಂಗದಲ್ಲಿ ಹಿಂದೆ ಇಲ್ಲದ ಭಾವನೆಗಳು ಬರದಂತೆ ನೋಡಿಕೊಳ್ಳುವುದು. ಆದ ಕಾರಣವೇ ಯಾವುದೋ ಒಂದೇ ಧರ್ಮ ಪ್ರಪಂಚಕ್ಕೆ ಅನ್ವಯಿಸುವ ಧರ್ಮವಾಗಬಾರದು. ಹಾಗಾದರೆ ತೀರಾ ಅಪಾಯಕಾರಿ. ಆಗ ಧರ್ಮ ಮತ್ತು ಆಧ್ಯಾತ್ಮಿಕ ಭಾವನೆ ನಾಶವಾಗುವುದು.

"ಧರ್ಮ ಬಾಯಿ ಮಾತಲ್ಲ.ನಂಬಿಕೆಯಲ್ಲ. ಸಿದ್ಧಾಂತವೂ ಅಲ್ಲ. ಅಥವಾ . ಅದೊಂದು ಕೋಮುವಾರು ಭಾವನೆಯೂ ಅಲ್ಲ. ಧರ್ಮ ಕೋಮುಗಳಲ್ಲೂ-ಸಂಘಗಳಲ್ಲೂಜೀವಿಸಲಾರದು. ಆತ್ಮನಿಗೂ ದೇವನಿಗೂ ಇರುವ ಸಂಬಂಧವಿದು. ಇದನ್ನು ಒಂದು ಸಂಘವನ್ನಾಗಿ ಮಾಡಿದರೆ ಧರ್ಮವೆಂಬುದು ವ್ಯಾಪಾರವಾಗುತ್ತದೆ".

ವಿವೇಕಾನಂದರು ಪ್ರತಿಪಾದಿಸಿರುವ ಈ ಧರ್ಮ ದೃಷ್ಟಿ ಹಿಂದೂ ಧರ್ಮದ ಉತ್ಥಾನಕ್ಕೆ ಮಾತ್ರವಲ್ಲ-ಮಾನವ ಕುಲದ ಉತ್ಕರ್ಷಕ್ಕೆ ದಾರಿ ತೋರಿಸಬಲ್ಲುದು. ವಿವೇಕಾನಂದರ ಚಿಂತನೆ ಮತ್ತು ವಿಚಾರಗಳು ದೇಶದ ಎಲ್ಲ ಭಾಷೆಗಳಲ್ಲೂ ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಈ ಮಹಾ ಮೇಧಾವಿ ಯೋಗಿಯ ವಿಚಾರಗಳ ಆಳ ಅಧ್ಯಯನ ಭಾರತದ ಯುವ ಪೀಳಿಗೆಗೆ ತೀರಾ ಉಪಕಾರಿಯಾಗಬಲ್ಲುದು. ಮುನ್ನಡೆಯ ಯಾತ್ರೆಯಲ್ಲಿ ಕಣ್ಣುಕಟ್ಟಿದ ಕತ್ತಲಲ್ಲಿ ನಿಂತಿರುವ ಇಂದಿನ ಪೀಳಿಗೆ ವಿವೇಕಾನಂದರ ಜೀವನ-ಸಾಧನೆಯ ಅಧ್ಯಯನ ಮಾಡಲೇಬೇಕು. ಇಲ್ಲವಾದರೆ ಅವರು ಹಿಂದೂ ಧರ್ಮದ ಹೊಲಸು ತುಂಬಿದ ಕುಂಭವನ್ನು ಹೊತ್ತು ಮೆರವಣಿಗೆ ಮಾಡುವ ಪ್ರದರ್ಶನ ವಸ್ತುಗಳಾಗುತ್ತಾರೆ. ಸ್ವಾರ್ಥಿಗಳಿಗಾಗಿ-ಸ್ವತಂತ್ರರಾಗಿ ಬದುಕಲು ಅವರೆಂದಿಗೂ ಸಮರ್ಥರಾಗಲಾರರು. ●

ಉತ್ತರ

ನೀನೇ ನನ್ನ ಉಸಿರು
ಎನ್ನುವ ನಲ್ಲನಿಗೆ
ಮೆಲ್ಲನೆ ಕೇಳಿದಳು
ನಾನೀಗ ತಿಂಗಳ ಬಸಿರು

ಕಾಲೇಜು

ಶ್ರದ್ಧೆಯುಳ್ಳವರು
ಸೇರುವರು ಇಲ್ಲಿ ಜ್ಞಾನಸಂಗ
ಇಲ್ಲದವರು
ಯಾರು ಯಾರದೋ
ಸಂಗ

— ಎಸ್.ಡಿ. ನಾಯಕ್, ಶಿಗ್ಗಾ